ಕರ್ನಾಟಕ ರಾಜ್ಯ ಪದವಿಧರ ಮಹಾಮಂಡಳ (ರಿ)

ಮನವಿ ನಂ. - 7

ಮುಖ್ಯಸ್ಥರು, ಶಿಕ್ಷಣ ಸಂಸ್ಥೆಗಳು /
ಅನುದಾನಿತ/ಅನುದಾನ ರಹಿತ ಶಾಲಾ ಕಾಲೇಜುಗಳ ರುವಾರಿಗಳು ಮತ್ತು ಸರಕಾರಿ ಸರಕಾರೇತರ ಪದವಿಧರರು.

ನಾನು ಹಲವಾರು ಪತ್ರಗಳನ್ನು ವಿವಿಧ ಸಂಘ ಸಂಸ್ಥೆಗಳ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ತಮಗೂ ಬರೆಯುತ್ತಾ ಧಾರವಾಡ, ಹಾವೇರಿ, ಗದಗ, ಉತ್ತರ ಕನ್ನಡ ಜಿಲ್ಲೆ ಹಾಗೂ ಎಲ್ಲ ತಾಲೂಕು, ಹೋಬಳಿ ಮಟ್ಟದಲ್ಲಿ ಕಾರ್ಯಾಗಾರಗಳನ್ನೇರ್ಪಡಿಸಿ ವಿಧಾನ ಪರಿಷತ್ತಿನ ಅಧಿಕಾರದ ಬಗ್ಗೆ ತಮಗೆ ತಿಳಿಸುತ್ತಾ ಪರಿಷತ್ತು ರಚನೆ ಮಾಡಿ ತ್ಯಾಗ ಮಾಡಿರುವ ಬುದ್ಧಿ ಜೀವಿಗಳನ್ನು ಸಹ ಪರಿಚಯ ಮಾಡಿಸಿಕೊಡಲಾಗಿದ್ದು ತಾವು ವಿವಿಧ ರೂಪದಲ್ಲಿ ನಮ್ಮಿಂದ ತಿಳಿದುಕೊಂಡಿದ್ದೀರಿ, ಅದರಂತೆ ನಮಗೆ ಸಾಕಷ್ಟು ಸಹಕಾರವನ್ನು ತಾವು ನೀಡಿದ್ದು ಹೃದಯ ಪೂರ್ವಕವಾಗಿ ನಿಮ್ಮನ್ನು ಅಭಿನಂದಿಸುತ್ತಾ, ನನ್ನ ವೈಯಕ್ತಿಕ ಪರಿಚಯವನ್ನು ನಮ್ಮದೇ ಆದ ವೆಬ್ ಸೈಟ್ ಮುಖಾಂತರ ತಿಳಿದುಕೊಳ್ಳಬಹುದು. ಹಣ ನೀಡಿ ಜನಪ್ರತಿನಿಧಿಯಾಗುವ ವ್ಯಕ್ತಿಗಳನ್ನು ತಿರಸ್ಕರಿಸಿ ಪ್ರಜಾ ಪ್ರಭುತ್ವದ ಹಾಗೂ ಸಂವಿಧಾನದ ಉಳಿವಿಗಾಗಿ ಸಾಮಾನ್ಯ ವ್ಯಕ್ತಿ, ನಂಬಿಕೆಯುಳ್ಳವರು ಜನಪ್ರತಿನಿಧಿಯಾಗಲು ಅವಕಾಶಿಸುವದಗೋಸ್ಕರ ಪ್ರಮಾಣ ಮಾಡಿ.

ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ **Karnataka West Graduate** (ಪಶ್ಚಿಮ) ಪದವಿ ಕ್ಷೇತ್ರದಿಂದ ವಿಧಾನ ಪರಿಷತ್ತು ಚುನಾವಣೆ ನಡೆಯುತ್ತಿದ್ದು ತಾವು ಅಧಿಕೃತವಾಗಿ ಪರಿಷತ್ತು ಮತದಾರರ ಯಾದಿಯಲ್ಲಿ ಹೆಸರು ಸೇರ್ಪಡೆಯಾಗಿರುತ್ತದೆ. ಅ.ನಂ. ಹಾಗೂ ಭಾಗ ಸಂಖ್ಯೆ ನಿಮಗೆ ತಿಳಿಸಿದ ವಿಳಾಸದಲ್ಲಿ ನಮೂದಿಸಿದ್ದು CEO.Karnataka.gov.in website ಮುಖಾಂತರ ಮತದಾನದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಕೊಳ್ಳಬಹುದು. ಅಲ್ಲದೆ ತಮಗೆ ಈಗಾಗಲೇ ನಮ್ಮವರಿಂದ ಸಾಕಷ್ಟು ಮಾಹಿತಿ ಹಾಗೂ ಪತ್ರದ ಮುಖಾಂತರ ತಿಳಿಸಿದ್ದು. ಕೆಲವರಂತು ಪರಿಷತ್ತು ಬಗ್ಗೆ ಕಾಳಜಿವಹಿಸಿಲ್ಲ. ನೀವು ಕಟ್ಟಿದ ರಾಜ್ಯದ ಏಕೈಕ ಪದವಿಧರರಿಗೆ ಹೋರಾಟದ ಸಂಸ್ಥೆ "ಕರ್ನಾಟಕ ರಾಜ್ಯ ಪದವಿಧರ ಮಹಾಮಂಡಳ" (ಸಂಘಟನೆ)ಯಾಗಿದ್ದು, ತಾವು ನಮ್ಮ ವೆಬ್‌ಸೈಟ್ – www.spmk.in ಇದರಲ್ಲಿ ಕಾರ್ಯಚಟುವಟಿಕೆಗಳ ಹಾಗೂ Membership Registration (ಸದಸ್ಯತ್ವ) ಪಡೆಯಬಹುದಾಗಿರುತ್ತದೆ, ತಾವು ನಮ್ಮ ಹೋರಾಟದ ಬಗ್ಗೆ ಅಭ್ಯಸಿಸಿ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು. 2001 ರಿಂದ ಇಲ್ಲಿಯವರೆಗೆ ಎಂ.ಪಿ. ನಾಡಗೌಡ, ಮಹಾಂತೇಶ ಕೌಜಲಗಿ, ಮೋಹನ ಲಿಂಬಿಕಾಯಿ, ಸಂಕನೂರ, ಹನಮಂತ ನಿರಾಣಿಯಂತವರಿಗೆ ಬೆಂಬಲ ನೀಡಿದ್ದು ಅವರ ಆಯ್ಕೆಯಲ್ಲಿ ನಮ್ಮ ಪಾತ್ರವನ್ನು ತೋರಿಸಲಾಗಿತ್ತು. ನಮ್ಮ ಪಾತ್ರ ನಿಸ್ವಾರ್ಥದ ಪಾತ್ರವಾಗಿದ್ದು ಯಾರಿಂದಲು ನಮ್ಮ ಸಂಘಕ್ಕೆ ಶಕ್ತಿ ತುಂಬಲಿಲ್ಲ. ಅಲ್ಲದೆ ಪದವಿಧರರಿಗೆ ಆಗುವ ಅನ್ಯಾಯದ ಬಗ್ಗೆ ಚಿಂತಿಸಲಿಲ್ಲ ಮತ್ತು ಅನಾನುಕೂಲತೆಗಳ ಬಗ್ಗೆ ವಿಚಾರಿಸಲಿಲ್ಲ. ಆದ್ದರಿಂದ ನಮ್ಮ ಸಂಘದಿಂದ ಅಜೀವ ಸದಸ್ಯರು, ಸಾ.ಸದಸ್ಯರು, ವಿವಿಧ ಸಂಘಟನೆಗಳ ಹಾಗೂ ಹಲವಾರು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಅನುದಾನಿತ/ಅನುದಾನರಹಿತ ಶಿಕ್ಷಣ ಸಂಸ್ಥೆಯ ಸದಸ್ಯರೆಲ್ಲರೂ ಸೇರಿ ಸ್ಪರ್ಧೆಗಿಳಿಸಲು ತೀರ್ಮಾನಿಸಿರುವದರಿಂದ 2026 ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ ಪಶ್ಚಿಮ ಪದವಿ ಕ್ಷೇತ್ರದಿಂದ ಸ್ಪರ್ಧಿಯಾಗಲು ಬಯಸಿದ್ದೇನೆ. ನಿಮ್ಮ ಆಶೀರ್ವಾದ ಸಹಕಾರ ನನ್ನ ಮೇಲಿರಲೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತಿದ್ದು. ಸಂಘದಲ್ಲಿ ತಾವು ದಯವಿಟ್ಟು ಸೇರಿಕೊಂಡು ಸದಸ್ಯತ್ವ ಪಡೆದು ಆಶೀರ್ವದಿಸಬೇಕೆಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಬೇಡಿಕೊಳ್ಳುತ್ತಾ ತಮ್ಮ ಅನಿಸಿಕೆಗಳನ್ನು kspmahamandal@gmail.com ಗೆ mail ಮಾಡಬಹುದಾಗಿದ್ದು. 9449416747 ಈ ನಂಬರಿಗೆ ವಾಟ್ಸಆಪ್, ಟೆಲಿಗ್ರಾಂ ಸೇರಿಕೊಂಡು ತನು–ಮನ ಧನದೊಂದಿಗೆ ಸೇವಾರ್ಥಿಯಾಗುತ್ತೀರೆಂದು ಪ್ರಾರ್ಥಿಸುತ್ತೇನೆ.

Karnataka state Padavidhar Mahamandal

ವಂದನೆಗಳೊಂದಿಗೆ

Phone Pay Scaner

ಅಧ್ಯಕ್ಷರು
ಶ್ರೀ ಮಲ್ಲಿಕಾರ್ಜುನ ಚ. ಗಂಗಾಧರ,
ಎಂ.ಎ. ಎಲ್‌ಎಲ್.ಬಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ
ಮೊ. : 7204530571, 9513277007, 9449416747, 8861794027